(ದಿನಾಂಕ **20/07/2024** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಿಡಬ್ಲ್ಯೂ–1 ರವರ ಮುಖ್ಯ ವಿಚಾರಣೆ ವಾದಿ ಪರ ವಕೀಲರಿಂದ**

ನಾನು ಈ ಪ್ರಕರಣದಲ್ಲಿ ವಾದಿಯಾಗಿದ್ದು, ಈ ದಿನ ನನ್ನ ಮುಖ್ಯ ವಿಚಾರಣೆಯ ಹೇಳಿಕೆಯನ್ನು ಪ್ರಮಾಣ ಪತ್ರ ರೂಪದಲ್ಲಿ ಹಾಜರುಪಡಿಸಿದ್ದೇನೆ. ಅದರಲ್ಲಿ ಹೇಳಿರುವ ಸಂಗತಿಗಳೆಲ್ಲವೂ ಸತ್ಯ ಮತ್ತು ಅದನ್ನು ನಾನೇ ನಮ್ಮ ವಕೀಲರಿಗೆ ಹೇಳಿ ಬರೆಸಿ, ಸಹಿ ಮಾಡಿರುತ್ತೇನೆ.

ನನ್ನ ಮತ್ತು **5** ನೇ ಪ್ರತಿವಾದಿಯ ಮದುವೆಗೆ ಸಂಬಂಧಿಸಿದಂತೆ **5** ಫೋಟೋಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ–**1** ರಿಂದ **5** ಎಂದು ಗುರುತಿಸಲಾಯಿತು. ನನ್ನ ಮತ್ತು **5** ನೇ ಪ್ರತಿವಾದಿಯ ಮದುವೆಗೆ ಸಂಬಂಧಿಸಿದಂತೆಮದುವೆ ಆಮಂತ್ರಣ ಪತ್ರಿಕೆ ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ–**6** ಎಂದು ಗುರುತಿಸಲಾಯಿತು. ಎಂ.ಸಿ. ನಂ.**4/2023** ರ ಆರ್ಡರ್ ಶೀಟ್ ನ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ–**7** ಎಂದು ಗುರುತಿಸಲಾಯಿತು. ಎಂ.ಸಿ. ನಂ.**4/2023** ರಲ್ಲಿ ಸಲ್ಲಿಸಿರುವ ಅರ್ಜಿಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ–**8** ಎಂದು ಗುರುತಿಸಲಾಯಿತು. ದಿನಾಂಕ **02/03/2023** ರಂದು **1** ರಿಂದ **5** ನೇ ಪ್ರತಿವಾದಿಗೆ ನನ್ನ ವಕೀಲರ ಮೂಲಕ ಕಳುಹಿಸಿರುವ ಲೀಗಲ್ ನೋಟೀಸಿನ ಕಚೇರಿ ಪ್ರತಿ ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ–**9** ಎಂದು ಗುರುತಿಸಲಾಯಿತು. **5** ಅಂಚೆ ಸ್ವೀಕೃತಿಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ–**10** ರಿಂದ **14** ಎಂದು ಗುರುತಿಸಲಾಯಿತು. **5** ಕೊರಿಯರ್ ರಸೀದಿಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ–**15** ರಿಂದ **19** ಎಂದು ಗುರುತಿಸಲಾಯಿತು. **3** ಅಂಚೆ ಸ್ವೀಕೃತಿಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ನಿಪಿ–**20** ರಿಂದ **22** ಎಂದು ಗುರುತಿಸಲಾಯಿತು. ವಾಪಾಸಾದ ಎರಡು ಅಂಚೆ ಲಕೋಟೆಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ–**23** ಮತ್ತು **24** ಎಂದು ಗುರುತಿಸಲಾಯಿತು. **3** ವಾಪಾಸಾದ ಕೊರಿಯರ್ ಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ–**25** ರಿಂದ **27** ಎಂದು ಗುರುತಿಸಲಾಯಿತು. ದಿನಾಂಕ **10/03/2023** ರಂದು ಪ್ರತಿವಾದಿ ನಂ.**6** ಮತ್ತು **7** ರವರಿಗೆ ನನ್ನ ವಕೀಲರ ಮೂಲಕ ನೀಡಿರುವ ನೋಟೀಸಿನ ಕಚೇರಿ ಪ್ರತಿ ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ–**28** ಎಂದು ಗುರುತಿಸಲಾಯಿತು. ಎರಡು ಅಂಚೆ ರಸೀದಿಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ–**29, 30** ಎಂದು ಗುರುತಿಸಲಾಯಿತು. ಒಂದು ವಾಪಾಸಾದ ಅಂಚೆ ಲಕೋಟೆಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ–**31** ಎಂದು ಗುರುತಿಸಲಾಯಿತು.

ನನ್ನ ದಾವೆಯನ್ನು ಡಿಕ್ರಿ ಮಾಡಬೇಕಾಗಿ ಕೇಳಿಕೊಳ್ಳುತ್ತೇನೆ.

**(ಪಾಟೀ ಸವಾಲಿಗೆ ಸಮಯವನ್ನು ಕೋರಿದ್ದು, ಮುಂದೂಡಲಾಯಿತು)**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಹೊಳಲ್ಕೆರೆ.